**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.1159/2023**

ಪಿರ್ಯಾದಿ : ಸರ್ಕಾರ ಪೊನ್ನಂಪೇಟೆ ಪೋಲೀಸ್.

ವಿರುದ್ಧ

ಆರೋಪಿ : ಗಿರೀಶ,

**ದೋಷಾರೋಪಣೆ**

ಶ್ರೀಮತಿ ಆಶಾ ಕೆ.ಎಸ್., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದ ನಾನು ಆರೋಪಿಗಳಾದಃ

ಗಿರೀಶ,

ತಂದೆಃ ರಾಮು,

ಪ್ರಾಯಃ 36 ವರ್ಷ,

ವಾಸಃ ಜಯಂತಿ ಕಾಲೋನಿ,

ಬೆಸಗೂರು ಗ್ರಾಮ, ಕೊಡಗು.

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆಃ

ದಿನಾಂಕ 18.06.2017 ರಂದು ಸಮಯ ಮಧ್ಯಾಹ್ನ 3.30 ಗಂಟೆಗೆ ಪೊನ್ನಂಪೇಟೆ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಬೆಸಗೂರು ಗ್ರಾಮದ ಜಯಂತಿ ಕಾಲೋನಿಯಲ್ಲಿ ಸಾಕ್ಷಿ 1 ಸುಮಿತ್ರರವರು ವಾಸ ಮಾಡಿಕೊಂಡಿರುವ ಮನೆಗೆ ಆರೋಪಿಯಾದ ನೀವು ಹೋದಾಗ ಸಾಕ್ಷಿ 1 ರವರು ತಮ್ಮನ್ನು 2 ದಿನದಿಂದ ಮನೆಗೆ ಏಕೆ ಬಂದಿಲ್ಲ ಎಂದು ಪ್ರಶ್ನಿಸಿದಕ್ಕೆ ಆರೋಪಿಯಾದ ನೀವು ಸಾಕ್ಷಿ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿರುವಾಗ ಸಾಕ್ಷಿ 2 ರವರು ಏಕೆ ನನ್ನ ಮಗಳನ್ನು ಬೈಯುತ್ತೀಯಾ ಎಂದು ಕೇಳಿದ್ದಕ್ಕೆ ಆರೋಪಿಯಾದ ನೀವು ಮನೆಯೊಳಗೆ ಇದ್ದ ಕತ್ತಿಯನ್ನು ತೆಗೆದುಕೊಂಡು ಸಾಕ್ಷಿ 2 ರವರಿಗೆ ಹಲ್ಲೆ ಮಾಡಲು ಮುಂದಾದಾಗ ತಡೆಯಲು ಬಂದ ಸಾಕ್ಷಿ 1 ರವರಿಗೆ ತಮ್ಮ ಕೈಯಲ್ಲಿದ್ದ ಕತ್ತಿ ತಗುಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ ನಿಮ್ಮ ವಿರುದ್ಧ ಭಾ.ದ.ಸಂ.ಕಲಂ 324 ರಡಿಯಲ್ಲಿ ಶಿಕ್ಷಾರ್ಹವಾದ ಅಪಾಧನೆ ಇದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿಯಾದ ನೀವು ಸಾಕ್ಷಿ 2 ರವರಿಗೆ ಮನೆಯೊಳಗೆ ಇದ್ದ ಕತ್ತಿಯನ್ನು ತೆಗೆದುಕೊಂಡು ಸ್ವಇಚ್ಛೆಯಿಂದ ಸಾಕ್ಷಿ 2 ರವರ ಮೊಣಕೈಗೆ ಕಡಿದು ಗಂಭೀರ ಸ್ವರೂಪದ ಗಾಯ ಪಡಿಸಿರುವ ಮೂಲಕ ಭಾ.ದ.ಸಂ.ಕಲಂ 326 ರಡಿಯಲ್ಲಿ ಶಿಕ್ಷಾರ್ಹವಾದ ಅಪಾಧನೆ ಇದೆ.

Scanned with CamScanner

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿಯಾದ ನೀವು ಸಾಕ್ಷಿ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವ ಮೂಲಕ ಭಾ.ದ.ಸಂ.ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿಯಾದ ನೀವು ಸಾಕ್ಷಿ 1 ಮತ್ತು 2 ರವರನ್ನು ಕುರಿತು ನಿಮ್ಮನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುವ ಮೂಲಕ ಭಾ.ದ.ಸಂ.ಕಲಂ 506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

27/9/2023

ದಿನಾಂಕ:27.09.2023.
ಸ್ಥಳ: ಪೊನ್ನಂಪೇಟೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟೆ.

ಗಿರೀಶ

Scanned with CamScanner